

ಸಿ.ಎಸ್.ಬಿರಾದಾರ ಪ್ರೌಢ ಶಾಲೆ: ಉತ್ತಮ ಫಲಿತಾಂಶ


ವಿಜಯಪುರ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಸಿ.ಎಸ್.ಬಿರಾದಾರ ಪ್ರೌಢಶಾಲೆಯ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದುಕೊಂಡಿದೆ. ಶಾಲೆಯ ಫಲಿತಾಂಶ 100ಕ್ಕೆ 100 ರಷ್ಟಾಗಿದೆ.ವಿದ್ಯಾರ್ಥಿಗಳಾದ ರೋಹನ ರಾಠೋಡ ಶೇ.92.48, ಪ್ರಥಮ ಸ್ಥಾನ, ಪ್ರೀತಿ ಮಾನೆ ಶೇ.89.92 ಅಂಕದೊಂದಿಗೆ ದ್ವಿತೀಯ,ಸಮೀರ ಮುಲ್ಲಾ ಶೇ.89.44 ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ಸಾಕ್ಷಿ ಮಮದಾಪುರ ಶೇ.87.52 ಹಾಗೂ ಮಾಯಾ ಲಮಾಣಿ ಶೇ.86.44 ಅಂಕ ಗಳಿಸಿದ್ದಾರೆ. ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದ್ದು, ಶಾಲೆ ಕೀರ್ತಿ ಹೆಚ್ಚಿಸಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಪದಾಧಿಕಾರಿಗಳು, ಶಾಲಾ ಶಿಕ್ಷಕರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಗರಿಷ್ಠ 40°C | ಕನಿಷ್ಠ 25°C

ಸುದ್ದಿ ಸಿಂಚನ

ಕೆಸರಟ್ಟಿಯಲ್ಲಿ 16, 17ಕ್ಕೆ ಶಂಕರಲಿಂಗೇಶ್ವರ ಜಾತ್ರೆ

ತಾಳಿಕೋಟೆ: ಸಮೀಪದ ಕೆಸರಟ್ಟಿ ಗ್ರಾಮದ ತಪಸ್ವಿ ಶಂಕರಲಿಂಗೇಶ್ವರ ಮಹಾಸ್ವಾಮೀಜಿಗಳ 96ನೇ ಜಾತ್ರಾ ಮಹೋತ್ಸವ ಮೇ. 16 ಮತ್ತು 17ರಂದು 2ದಿನಗಳ



ಕಾಲ ವಿಜೃಂಭಣೆಯಿಂದ ಜರುಗಲಿದೆ. ಶ್ರೀಮಠದ ಸೋಮಲಿಂಗ ಮಹಾಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಜರುಗುವ ಜಾತ್ರೋತ್ಸವ ಅಂಗವಾಗಿ ಸುತ್ತಮುತ್ತಲಿನ ಹಾಲುಮತ ಬಂಜಾರ, ವಿವಿಧ ಸಮುದಾಯದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹರಕೆ ಸಮರ್ಪಿಸುತ್ತಾರೆ. ಮೇ.16 ಬಾದಮಿ ಅಮವಾಸ್ಯೆ ಬೆಳಗಿನ ಜಾವ 5 ಗಂಟೆಯಿಂದ 7 ಗಂಟೆವರಿಗೆ ಶಂಕರಲಿಂಗೇಶ್ವರ ಮಹಾಸ್ವಾಮೀಜಿಗಳ ಗದ್ದುಗೆಗೆ ಹಾಗೂ ಅಮೋಘಸಿದ್ಧ ಮೂರ್ತಿಗೆ ಪೂಜಾ ಆರತಿ ಕಾರ್ಯಕ್ರಮ ಜರುಗಲಿದೆ. ಈ ಜಾತ್ರೆಯಲ್ಲಿ 101 ಡೊಳ್ಳಿನ ಕೈಪಟ್ಟು ವಾಲಗ ನೋಡುಗರ ಮನಸೆಳೆಯಲಿದೆ. ಪೂಜ್ಯರ ಭಾವಚಿತ್ರದ ಪಲ್ಲಕ್ಕಿ ಉತ್ಸವದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜರುಗಲಿದೆ. ಪೂಜ್ಯ ಶ್ರೀಗಳ 20ನೇ ತುಲಾಭಾರ ಹಾಗೂ ಪ್ರಶಸ್ತಿ ಪ್ರದಾನ: 96ನೇ ಜಾತ್ರಾ ಮಹೋತ್ಸವ ನಿಮಿತ್ತ ಮೇ 16ರಂದು ಸಂಜೆ 6 ಗಂಟೆಗೆ ನಡೆಯುವ ಸಮಾರೋಪ ಸಭೆಯಲ್ಲಿ ಪೂಜ್ಯರು, ರಾಜಕೀಯ ಮುಖಂಡರು, ನೇತೃತ್ವದಲ್ಲಿ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿ ಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸನ್ಮಾನ ಜರುಗಲಿದೆ. ಶರಣರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ನಡೆಯುವ 20ನೇ ತುಲಾಭಾರ ಕಾರ್ಯಕ್ರಮ ಜರುಗಲಿದೆ. ಮೇ.17ರಂದು ಬೆಳಗ್ಗೆ 7ಗಂಟೆಗೆ ಗ್ರಾಮದ ಪ್ರಮುಖ ಬದಿಗಳಲ್ಲಿ ವಿವಿಧ ವಾದ್ಯ ವೈಭವದೊಂದಿಗೆ ಪಲ್ಲಕ್ಕಿ ಉತ್ಸವ ಜರಗಲಿದೆ ಎಂದು ಶ್ರೀಮಠದ ಸೋಮಲಿಂಗ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬುದ್ಧ ಪೂರ್ಣಿಮೆ ಕಾರ್ಯಕ್ರಮ

ಬಸವನಬಾಗೇವಾಡಿ: ಬುದ್ಧನ ಉನ್ನತ ಆದರ್ಶಗಳು, ಅಹಿಂಸಾ ತತ್ವ, ಸಾಮರಸ್ಯದ ಸಂದೇಶಗಳು ಚಿರನೂತನ 'ವಾಗಿದ್ದು, ಸಮಾಜಕ್ಕಾಗಿ ಸೇವೆ ಮಾಡುವ ಸ್ಫೂರ್ತಿ ನೀಡಿದ್ದಾರೆ ಎಂದು ತಹಸೀಲ್ದಾರ್ ವೈ.ಎಸ್.ಸೋಮನಕಟ್ಟಿ ಹೇಳಿದರು. ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡಿದ್ದ ಬುದ್ಧ ಪೂರ್ಣಿಮೆ ಕಾರ್ಯಕ್ರಮದಲ್ಲಿ ಗೌತಮ ಬುದ್ಧನ ಭಾವಚಿತ್ರಕ್ಕೆ ನಮನ ಸಲ್ಲಿಸಿದ ನಂತರ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಮಂಜುಳಾ ಹಿರೇಮನಿ, ಸುರೇಶ ಬಾಗೇವಾಡಿ, ವ್ಹಿ.ಬಿ.ಗೊಂಗಡಿ, ಎಸ್.ಜೆ.ದೊಡಮನಿ, ಎಸ್.ಐ.ರೇವೂರಕರ, ಜಿ.ಎಂ.ಪಾಟೀಲ, ವಿಲಾಸ ಜಾಡರ, ಡಿಎಸ್ಎಸ್ ಮುಖಂಡರಾದ ಅರವಿಂದ ಸಾಲವಾಡಗಿ, ಅಶೋಕ ಚಲವಾದಿ,ಮಹಾಂತೇಶ ಸಾಸಾಬಾಳ, ಮಹೇಶ ಹೆಬ್ಬಾಳ, ಪ್ರಶಾತ ಚಲವಾದಿ, ರಾಮಪ್ಪ ಚಲವಾದಿ, ಭೀಮರಾಯ ಮಾಸ್ತಿ ಇತರರು ಇದ್ದರು.

ಜ್ಯೋತಿಷಿ ಅನಂತಭಟ್ ನಿಧನ

ತಾಳಿಕೋಟೆ: ಜ್ಯೋತಿಷ್ಯ ಶಾಸ್ತ್ರದ ಮೂಲಕವೇ



ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದ ಖ್ಯಾತ ಜ್ಯೋತಿಷಿ ಅನಂತಭಟ್ ಜೋಶಿ(80) ಮಂಗಳವಾರ ವಯೋಸಹಜ ನಿಧನರಾಗಿದರು. ಮೃತರಿಗೆ ಓರ್ವ ಪುತ್ರ, ಓರ್ವ ಪುತ್ರಿ ಸೇರಿ ಅಪಾರ ಬಂಧು ಬಳಗ ಇದೆ. ತಾಲೂಕಿನ ಪತ್ತೆಪೂರ ಎಂಬ ಚಿಕ್ಕ ಗ್ರಾಮದಲ್ಲಿ ಗಿರಿಧರಭಟ್ ಲಕ್ಷ್ಮೀಬಾಯಿ ದಂಪತಿಗಳ ಉದರದಲ್ಲಿ ಜನಿಸಿದ್ದ ಅನಂತಭಟ್ ಜೋಶಿ ಅವರು ಹಲವು ವರ್ಷಗಳ ಕಾಲ ಕೃಷಿಕರಾಗಿ ತೊಡಗಿಕೊಂಡು ನಂತರ ಅಂಚೆ ಇಲಾಖೆಯ ಪತ್ರವಿತರಕರಾಗಿ ಸೇವೆ ಸಲ್ಲಿಸಿದ್ದರು.

ಜಲಾಶಯ ಮಟ್ಟ

ಆಲಮಟ್ಟಿ

- ಗರಿಷ್ಠ ಮಟ್ಟ..................519.60ಮೀ.
- ಇಂದಿನ ಮಟ್ಟ................509.52ಮೀ.
- ಒಳಹರಿವು.....................ಇಲ್ಲ
- ಹೊರಹರಿವು.................3,727 ಕ್ಯು



ಸಿಂದಗಿ ಪಟ್ಟಣದ ತಾ.ಶಿ.ಪ್ರ ಮಂಡಳಿಯ ಸಿ.ಎಂ. ಮನಗೂಳಿ ಪದವಿ ಮಹಾವಿದ್ಯಾಲಯ, ಸಿಂದಗಿ ಹಾಗೂ ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ವಿಜಯಪುರ ದ್ವಿತೀಯ ವಲಯದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ಮಕ್ಕಳ ಬೆಳವಣಿಗೆಗೆ ಕ್ರೀಡೆ ಸಹಕಾರಿ

• **ಕನ್ನಡಪ್ರಭ ವಾರ್ತೆ** ಸಿಂದಗಿ

ಪಾಠದ ಜೊತೆಗೆ ಕ್ರೀಡೆಗೂ ಸಮಾನ ಮಹತ್ವ ನೀಡಿದಾಗ ಮಾತ್ರ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವೆಂದು ಪ್ರಾಚಾರ್ಯ ಎ.ಆರ್. ಹೆಗ್ಗಣದೊಡ್ಡಿ ಅಭಿಪ್ರಾಯಪಟ್ಟರು.

ಪಟ್ಟಣದ ತಾ.ಶಿ.ಪ್ರ ಮಂಡಳಿಯ ಸಿ.ಎಂ. ಮನಗೂಳಿ ಪದವಿ ಮಹಾವಿದ್ಯಾಲಯ, ಸಿಂದಗಿ ಹಾಗೂ ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಜಯಪುರ ದ್ವಿತೀಯ ವಲಯದ ವಾಲಿಬಾಲ್ ಪಂದ್ಯಾವಳಿಯ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮಾತನಾಡಿದರು. ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ 3 ತಂಡಗಳಿಗೆ ಟ್ರೋಫಿ ಮತ್ತು ಬಹುಮಾನ ವಿತರಿಸಲಾಯಿತು. ಎಚ್.ಎಸ್.ಪಾಟೀಲ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಪ್ರಥಮ ಸ್ಥಾನ, ಸಿ.ಎಂ.ಮನಗೂಳಿ ಪದವಿ ಮಹಾವಿದ್ಯಾಲಯ ತಾಳಿಕೋಟಿ ದ್ವಿತೀಯ ಸ್ಥಾನ, ಜೆ.ಎಚ್.ಪಟೇಲ್ ಶಿಕ್ಷಣ ಮಹಾವಿದ್ಯಾಲಯ ಸಿಂದಗಿ ತೃತೀಯ ಸ್ಥಾನ ಗಿಟ್ಟಿಸಿಕೊಂಡಿವೆ. ಸಂತೋಷ ಬಳಗೊಂಡ ಉತ್ತಮ ಹೊಡೆತಗಾರ, ಉಮಾಕಾಂತ ಚವ್ಹಾಣ ಉತ್ತಮ ತೂರುಗಾರ, ಅಮೀತ ಕನವಳ್ಳಿ ಸರ್ವಾಂಗೀಣ ಆಟಗಾರ, ಸತೀಶ ಹೂನಳ್ಳಿ ಉತ್ತಮ ಲಿಬ್ರೋ ಪ್ರದರ್ಶಿಸಿದರು. ಭೀಮಾ ಶಂಕರ ನೆಲ್ಲಗಿ, ಮುತ್ತು ಮುಂಡೇವಾಡಗಿ ಕ್ರೀಡಾಪಟುಗಳಿಗೆ ಪಾರಿತೋಷಕ ವಿತರಿಸಿದರು.

ಪ್ರಾಚಾರ್ಯ ಎಸ್.ಎಂ.ಬಿರಾದಾರ, ಉಪನ್ಯಾ ಸಕರಾದ ರಾಹುಲ ಕಾಂಬಳೆ, ಎಸ್.ಕೆ.ಹೂ ಗಾರ, ಸತೀಶ ಬಿರಾದಾರ, ರಮೇಶ ಯಂಕಂ ಚಿಕರ್, ಎಸ್.ಎ.ಜಾಗೀರದಾರ್, ಎಂ.ಎಂ.ಕೆಂಭಾವಿ, ಕೆ.ಎಚ್.ಸೋಮಾಪೂರ ಹಾಗೂ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇನ್ನಿತರರು ಇದ್ದರು.

ನನ್ನನ್ನು ಶಾಸಕ ಮಾಡಿದ್ದೇ ಬಿಎಸ್‌ವೈ

ನನ್ನ ರಾಜಕೀಯ ಗುರುವು ಹೌದು: ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ

• **ಕನ್ನಡಪ್ರಭ ವಾರ್ತೆ** ವಿಜಯಪುರ

ರಾಜ್ಯದಲ್ಲಿ ಬಿಜೆಪಿಯನ್ನು ತಳಮಟ್ಟದಿಂದ ಕಟ್ಟಿದ ಹುಟ್ಟು ಹೋರಾಟಗಾರ ಬಿ.ಎಸ್.ಯಡಿಯೂರಪ್ಪನವರ 50ನೇ ವರ್ಷದ ತಪಸ್ಸು ಹಾಗೂ ಪರಿಶ್ರಮಕ್ಕಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಅಭಿನಂದನಾ ಸಮಾರಂಭ ಸಂತಸ ತಂದಿದೆ ಎಂದು ಜಮಖಂಡಿ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪನವರು ನಮ್ಮಂತಹ ನೂರಾರು ಕಾರ್ಯಕರ್ತರನ್ನು ಬೆಳೆಸಿದ್ದು, ಭಾಜಪಾ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯಲು ಕಾರಣೀಭೂತರಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ ಎಂದರು.

ಅಖಂಡ ಜಿಲ್ಲೆಯಲ್ಲಿ ಜನಸಂಘದ ಕಾಲದಿಂದಲೂ ಅಸ್ತಿತ್ವವಿಟ್ಟುಕೊಂಡು ಹೋರಾಟ ಮಾಡುತ್ತಿದ್ದ ಹಿರಿಯರ ತಂಡವಿತ್ತು. ಅದರಲ್ಲಿ ಸಂಸ್ಥಾಪಕ ಸದಸ್ಯರಾದ ಡಾ. ಮಹೀಂದ್ರಕರ, ಜ್ಯೋತಿಪ್ರಕಾಶ ಸಾಳುಂಕೆ, ಗಣಪತರಾವ ಕಾಂಬಳೆ, ಮಾಲಗಾರ ಮಾಸ್ತರ, ಗಣಪತರಾವ ಕಾಂಬಳೆ, ಗುಳೇದಗುಡ್ಡದ ರಾಠಿ ಮುಂತಾದ ಹಿರಿಯರ ತಂಡವಿತ್ತು. ಯಡಿಯೂರಪ್ಪನವರ ನೇತೃತ್ವದಲ್ಲಿ ಅಖಂಡ ಜಿಲ್ಲೆಯಲ್ಲಿ ಬಸನಗೌಡ ಪಾಟೀಲ, ಪಿ.ಹೆಚ್.ಪೂಜಾರ, ಭಾಂಡಗೆ, ಸಿದ್ಧಲಿಂಗ ಹಂಜಗಿ, ಸಿಂದಗಿಯ ಎಂ.ಎಸ್.ಮಠ, ಬೀಳಗಿಯ ಡಾ.ದೇಶಪಾಂಡೆ, ಮುಧೋಳದ ಟಂಕಸಾಲಿ ಬಂಧುಗಳು ಮುಂತಾದ ನೂರಾರು ನಾಯಕರು ಪಕ್ಷಕ್ಕಾಗಿ ತಮ್ಮ ಸಮಯ ಮೀಸಲಿಟ್ಟಿದ್ದರು ಎಂಬುವುದನ್ನು ಸ್ಮರಿಸಬೇಕಾಗುತ್ತದೆ ಎಂದರು.

ಅಖಂಡ ವಿಜಯಪುರ ಜಿಲ್ಲೆಗೂ ಯಡಿಯೂರಪ್ಪನವರಿಗೂ ಒಂದು ಅವಿನಾಭಾವ ಸಂಬಂಧವಿದೆ. ರೈತರ ಕಷ್ಟಗಳನ್ನು ಅರ್ಥಮಾಡಿಕೊಂಡು ಹಳ್ಳಿಹಳ್ಳಿಗೆ ಪ್ರವಾಸ ಮಾಡಿ, ರೈತರನ್ನು ಬಡಿದೆಬ್ಬಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ರೈತರ ಸಾಲ ಮನ್ನಾಕ್ಕಾಗಿ ಆಗ್ರಹಿಸಿ ಬಸವನ ಬಾಗೇವಾಡಿ, ಬನವಾಸಿ ಹಾಗೂ ಬೀದರಗಳಿಂದ 3 ಬಾರಿ ರೈತಸಾಲ ಮನ್ನಾಕ್ಕಾಗಿ ಅವರು ಮಾಡಿದ ರೈತಯಾತ್ರೆ ಮರೆಯಲಿಕ್ಕಾಗದು. ಪ್ರತಿಯೊಬ್ಬರಿಗೆ ರಾಜಕೀಯದಲ್ಲಿ ಒಬ್ಬ ಗುರು ಅಂತ ಇರುತ್ತಾರೆ. ಆದರೆ, ನನಗೆ ಇಬ್ಬರು ಗುರುಗಳು. ಒಬ್ಬರು ಯಡಿಯೂರಪ್ಪ ಇನ್ನೊಬ್ಬರು ಅನಂತಕುಮಾರ. ನನ್ನನ್ನು ಹಂತ ಹಂತವಾಗಿ ಬೆಳೆಸಿ ಶಾಸಕನನ್ನಾಗಿ ಮಾಡಿದ್ದು ಯಡಿಯೂರಪ್ಪನವರೇ ಎಂದು ನಾನು ಅಭಿಮಾನದಿಂದ ಹೇಳುತ್ತೇನೆ ಎಂದರು.

ಸಂಘಟನೆಗಾಗಿ ಅವರು ನಮ್ಮ ಅಖಂಡ ಜಿಲ್ಲೆಯಲ್ಲಿ ಶಿವಮೊಗ್ಗಕ್ಕಿಂತ ಹೆಚ್ಚು ಪ್ರವಾಸ ಮಾಡಿ 2008ರ ವಿಧಾನಸಭೆ ಚುನಾವಣೆಯಲ್ಲಿ 15 ರಲ್ಲಿ 12 ಸ್ಥಾನದಲ್ಲಿ ನಾವೇ ಗೆದ್ದಿರುವುದು. ಅದಕ್ಕೆ ಕಾರಣೀಕರ್ತರು ಯಡಿಯೂರಪ್ಪ ಮತ್ತು ಅನಂತಕುಮಾರ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿಯ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಜಿಲ್ಲಾ ಪ್ರಧಾನಕಾರ್ಯದರ್ಶಿ ಈರಣ್ಣ ರಾವೂರ, ಮಲ್ಲು ಕಲಾದಗಿ, ವಿಜಯ ಜೋಶಿ ಉಪಸ್ಥಿತರಿದ್ದರು.



> **ಯಡಿಯೂರಪ್ಪನವರು ರೈತರ ಬಗ್ಗೆ ವಿಶೇಷ ಬಜೆಟ್ ಮಂಡಿಸಿ ಒಂದು ದಾಖಲೆ ನಿರ್ಮಿಸಿದರು. ಕಡು ಬಡವರು, ಹೆಣ್ಣುಮಕ್ಕಳು ಹಾಗೂ ಸಮಾಜದ ಕಟ್ಟಕಡೆಯ ಬಡವರಿಗೆ ಅನೇಕ ಯೋಜನೆಗಳನ್ನು ತಂದವರು. ಅವರ ಕಠಿಣ ಪರಿಶ್ರಮ, ನಿರಂತರ ಪ್ರವಾಸ, ಅನ್ಯಾಯದ ವಿರುದ್ಧ ಸದನದ ಒಳಗೆ ಹಾಗೂ ಹೊರಗೆ ಮಾಡಿದ ಹೋರಾಟ ನಮ್ಮೆಲ್ಲರಿಗೆ ಒಂದು ಆದರ್ಶವಾಗಿದೆ. ಇಂತಹ ಅದ್ಭುತ ಹಾಗೂ ನೇರ ನುಡಿಯ ನಾಯಕನಿಗೆ ಅಖಂಡ ಜಿಲ್ಲೆಯ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.**
>
> • **ಶ್ರೀಕಾಂತ ಕುಲಕರ್ಣಿ,** ಮಾಜಿ ಶಾಸಕರು, ಜಮಖಂಡಿ ಮತಕ್ಷೇತ್ರ.

24ಕ್ಕೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪಂಚಮಸಾಲಿ ಮುಖಂಡ ಸುರೇಶ ಬಿರಾದಾರ ಮಾಹಿತಿ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿನಲ್ಲಿ ಉತ್ತಮ ಅಂಕ ಪಡೆದು ಸಾಧನೆಗೈದ ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗೆ ಜಿಲ್ಲೆಯಲ್ಲಿ ಮೊದಲ ಬಾರಿಗೆ ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರನೀಡಲಾಗುತ್ತಿದೆ. ಮೇ24ರಂದು ನಗರದ ವೀರರಾಣಿ ಕಿತ್ತೂರು ಚೆನ್ನಮ್ಮ ಸಮುದಾಯ ಭವನದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ ಜರುಗಲಿದೆ ಎಂದು ಪಂಚಮಸಾಲಿ ಸಮಾಜದ ಮುಖಂಡ ಸುರೇಶ ಬಿರಾದಾರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪಂಚಮಸಾಲಿ ಸಮಾಜದ ಮುಖಂಡರೆಲ್ಲ ಸೇರಿ ನಮ್ಮ ಸಮಾಜದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರಿಗೆ ಜಿಲ್ಲಾ ಮಟ್ಟದಲ್ಲಿ ಪ್ರೋತ್ಸಾಹಿಸುವ ಕೆಲಸ ಮೊದಲ ಬಾರಿಗೆ ಮಾಡಲಾಗುತ್ತಿದೆ. 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಶೇ.90 ಹಾಗೂ ಅದಕ್ಕಿಂತ ಮೇಲ್ಪಟ್ಟ ವಿದ್ಯಾರ್ಥಿಗಳು ಹಾಗೂ ಕೇಂದ್ರೀಯ ವಿದ್ಯಾಲಯ ಮತ್ತು ಸಿಬಿಎಸ್ಇ ಶಾಲೆಗಳಲ್ಲಿ ಶೇ.85 ಹಾಗೂ ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿದವರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಇನ್ನು 2025-26ರ ಸಾಲಿನಲ್ಲಿ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಶೇ.90 ಹಾಗೂ ಅದಕ್ಕಿಂತ ಮೇಲ್ಪಟ್ಟು ಅಂಕಗಳನ್ನು ಪಡೆದು ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರನೀಡಲಾಗುವುದು. ವಿಜಯಪುರ ಜಿಲ್ಲೆಯ ವಿದ್ಯಾರ್ಥಿಗಳು ಬೇರೆಡೆ ಓದಿದ್ದರೂ ಸಹ ಅಂತಹವರಿಗೆ ಪುರಸ್ಕಾರವಿದೆ. ಸಾಧನೆಗೈದ ಸಮಾಜದ ವಿದ್ಯಾರ್ಥಿಗಳು ಮೇ 15ರೊಳಗಾಗಿ ತಮ್ಮ



ಅಂಕಪಟ್ಟಿಝರಾಕ್ಸ್‌ಪ್ರತಿ, ಪಾಸಪೋರ್ಟ್ ಸೈಜಿನ ಎರಡು ಫೋಟೊಗಳು, ವಿಳಾಸದ ಪುರಾವೆ (ಆಧಾರಕಾರ್ಡ್) ಹಾಗೂ ಮೊ. ಸಂಖ್ಯೆಯನ್ನು ನಗರದ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯಲ್ಲಿ ತಲುಪಿಸಬೇಕು. ಅಥವಾ ಸಂಯೋಜಕರ ಮೊ. 9448272048, 9448570878, 8296620386,9900628834 ವಾಟ್ಸಾಪ್ ಮೂಲಕವು ಕಳುಹಿಸಿಕೊಡಬಹುದು ಎಂದು ತಿಳಿಸಿದರು. ಜಿಲ್ಲೆಯ ಮೂಲೆಮೂಲೆಯಿಂದ ಸುಮಾರು ಐದು ಸಾವಿರ ಸಮುದಾಯದವರು ಸೇರಲಿದ್ದು, ಈ ಮಹತ್ವದ ಕಾರ್ಯಕ್ರಮದಲ್ಲಿ ಪ್ರತಿಭಾವಂತ ಮಕ್ಕಳಿಗೆ ಗುರುತಿಸುವ ಕೆಲಸ ಆಗಲಿದೆ. ಸಮಾಜದ ಬಡ ಕುಟುಂಬದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಲು ಕಿತ್ತೂರು ರಾಣಿ ಚೆನ್ನಮ್ಮ ವಿಜಯೋತ್ಸವ ಪ್ರತಿಷ್ಠಾನ ಸಮಿತಿಯಿಂದ ಸ್ಕಾಲರಶಿಪ್ ಸಹ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹೊನಮಲ್ಲ ಸಾರವಾಡ, ಬಸವರಾಜ ಕಳಸಗೊಂಡ, ಬಿ.ಎಂ.ಬಿರಾದಾರ, ಅಶೋಕ ಬಿರಾದಾರ, ಮುತ್ತು ಜಂಗಮಶೆಟ್ಟಿ, ಶಂಕರ ಸೋಂಪುರ ಇದ್ದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

• **ಕನ್ನಡಪ್ರಭ ವಾರ್ತೆ** ಚಡಚಣ

ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರೋತ್ಸಾಹ ಹಾಗೂ ಸನ್ಮಾನ ಹೆಚ್ಚಿನ ಸಾಧನೆಗೆ ಪ್ರೇರೇಪಿಸುತ್ತದೆ ಎಂದು ಶಾಸಕ ವಿಠ್ಠಲ ಕಟಕದೊಂಡ ಹೇಳಿದರು. ಸ್ಥಳೀಯ ಎಂ.ಇ.ಎಸ್. ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಸೋಮವಾರ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ ಉತ್ತಮ ಸಾಧನೆ ಮಾಡಿದ ಹಾಗೂ ಶೇ.100 ಫಲಿತಾಂಶ ಪಡೆದ ಶಾಲಾ ಮುಖ್ಯಸ್ಥರು, ವಿಷಯವಾರು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗಾಗಿ ಆಯೋಜಿಸಿ ದ್ದ ಅಭಿನಂದನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಬಿಇಒ ಚಿದಾನಂದ ಕಟ್ಟಿಮನಿ ಮಾತನಾಡಿ, ತಾಲೂಕಿನ 49 ಪ್ರೌಢಶಾಲೆಗಳಲ್ಲಿ 18 ಪ್ರೌಢಶಾಲೆಗಳು ಶೇ.100 ಫಲಿತಾಂಶ ಪಡೆದಿವೆ. ನೂರಾರು ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಶೇ.100 ಅಂಕ ಪಡೆದಿದ್ದಾರೆ ಎಂದರು.ತಹಸೀಲ್ದಾರ ಸಂಜಯ ಇಂಗಳೆ ಮಾತನಾಡಿ, ನಾರಾಯಣ ಫೌಂಡೇಶನ್ ನಿಂದ ಪ್ರತಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್



ಹಾಗೂ ಸ್ಮಾರ್ಟ್ ಕ್ಲಾಸ್ ಉಪಕರಣ ಕೊಡಿಸಲು ಪ್ರಯತ್ನಿಸಲಾಗುವುದು ಎಂದರು.

ತಾಪಂ ಇಒ ಅಶೋಕ ರಾಠೋಡ ಮಾತನಾಡಿ, ಶೀಘ್ರದಲ್ಲಿಯೇ ಎಸ್ಸೆಸ್ಸೆಲ್ಸಿ ನಂತರ ಮುಂದೇನು ಎಂಬ ವಿಷಯದ ಕುರಿತು ವಿದ್ಯಾರ್ಥಿಗಳಿಗಾಗಿ ಒಂದು ದಿನ ಕಾರ್ಯಾಗಾರ ಆಯೋಜಿಸಲಾಗುವುದು ಎಂದರು. ಡಿಡಿಪಿಐ ಸಾಲೀಮಠ ಮಾತನಾಡಿ, ಪ್ರತಿಶಾಲೆ ಶೇ.100 ಫಲಿತಾಂಶ ಪಡೆಯಲು ಅಲ್ಲಿನ ವಿಷಯ ಶಿಕ್ಷಕರ ಕಾರ್ಯ ಹಾಗೂಪರಿಶ್ರಮವೇಮಾನದಂಡವಾಗಿದೆ. ಜಿಲ್ಲೆ 700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೆ.96 ಫಲಿತಾಂಶ ಪಡೆದು ಜಿಲ್ಲೆಗೆ ಹೆಸರು ತಂದಿದ್ದಾರೆ ಎಂದರು. ಬಿ.ಎಸ್.ಮಜ್ಜಗಿ, ಎ.ಎಸ್.ಸೊನಗಿ, ಬಂದಿ, ಗುರು ಜೇವೂರ, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

ಪ್ರೀತಿ, ಅನುಕಂಪದಿಂದ ಜೀವಿಸಿ: ಪ್ರೊ. ಹಿರೇಮಠ

ಸರಕಾರಿ ನಿವೃತ್ತ ನೌಕರರ ಸಂಘ ನೂತನ ಪದಾಧಿಕಾರಿಗಳ ಆಯ್ಕೆ | ಪದಗ್ರಹಣ, ಮಾಸಿಕ ಸಭೆ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಜೀವನದಲ್ಲಿ ಕೋಪ-ತಾಪಗಳನ್ನು ತ್ಯೇಜಿಸಿ ಕುಟುಂಬ ಸದಸ್ಯರೊಂದಿಗೆ ಪ್ರೀತಿ, ಅನುಕಂಪದಿಂದ ಬಾಳಬೇಕು ಎಂದು ಹಿರಿಯ ಸಾಹಿತಿ ಪ್ರೊ.ಬಿ.ಎಂ.ಹಿರೇಮಠ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದ ಹತ್ತಿರದ ನೌಕರ ಭವನದಲ್ಲಿ ಸರಕಾರಿ ನಿವೃತ್ತ ನೌಕರರ ಸಂಘ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಆಯ್ಕೆ, ಪದಗ್ರಹಣ ಮತ್ತು ಮಾಸಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ದೇಹಕ್ಕೆ ವಯಸ್ಸಾದಂತೆ, ಅಂಗಾಂಗಗಳಲ್ಲಿ ಶಕ್ತಿ ಕುಂದಿ, ಚೈತನ್ಯ ಬತ್ತಲು ಪ್ರಾರಂಭಿಸುತ್ತದೆ. ಇಂತಹ ಅವಸ್ಥೆಯಲ್ಲಿ ಮಕ್ಕಳು ಹಾಗೂ ಸೊಸೆಯಂದಿರ ಆಸರೆ ಅಗತ್ಯವಾಗಿದೆ. ಆದ್ದರಿಂದ ಕುಟುಂಬ ಸದಸ್ಯರೊಂದಿಗೆ ಪ್ರೀತಿ, ಅನುಕಂಪದಿಂದ ಜೀವನ ಸಾಗಿಸಬೇಕು ಎಂದರು. ಸಾಹಿತಿ ಅಶೋಕ ಮಣಿ ಅಧ್ಯಕ್ಷರಾಗಿ ಹಾಗೂ ಎಸ್.ಎ.ಬೇವಿನಗಿಡ ಪ್ರಧಾನ ಕಾರ್ಯದರ್ಶಿಯಾಗಿ, ಬಿ.ಎಚ್.ಬಳಬಟ್ಟಿ ಅವರನ್ನು ಕೋಶಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು, ಅವರಿಗೆ ನಾನು ಶುಭ ಕೋರುತ್ತೇನೆ ಎಂದರು.

ತಾಳಿಕೋಟೆಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಎಂ.ಹಿರೇಮಠಮಾತನಾಡಿ, ಮುಪ್ಪುಬಂದಾಗಗಪ್ಪನೇ ಇರಬೇಕು, ತಾಳ್ಮೆ ಕಳೆದುಕೊಂಡು ನಾಲಿಗೆಯನ್ನು ಹರಿಬಿಟ್ಟರೆ ಕುಟುಂಬಸ್ಥರ ಕೆಂಗಣ್ಣಿಗೆ ಗುರಿಯಾಗಿ, ಬೀದಿ ಪಾಲಾಗಬೇಕಾದೀತು ಎಂದು ಹೇಳಿದರು.



ಮುದ್ದೇಬಿಹಾಳ ಪಟ್ಟಣದ ಬಸವೇಶ್ವರ ವೃತ್ತದ ಹತ್ತಿರದ ನೌಕರ ಭವನದಲ್ಲಿ ಸರಕಾರಿ ನಿವೃತ್ತ ನೌಕರರ ಸಂಘ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಆಯ್ಕೆ, ಪದಗ್ರಹಣ ಮತ್ತು ಮಾಸಿಕ ಸಭೆ ನಡೆಯಿತು.

ಸಂಘದನಿಕಟಪೂರ್ವ ಅಧ್ಯಕ್ಷ ಎಂ.ವಿ.ಮಾಟಲದಿನ್ನಿ, ಸಂಘದ ನೂತನ ಅಧ್ಯಕ್ಷ ಅಶೋಕ ಮಣಿ ಮಾತನಾಡಿದರು. ನಿಕಟಪೂರ್ವ ಹಾಗೂ ನೂತನ ಪದಾಧಿಕಾರಗಳನ್ನು ಸನ್ಮಾನಿಸಲಾಯಿತು.

ಸಂಘದ ಗೌರವಾಧ್ಯಕ್ಷ ಬಾಪುಗೌಡ ಪಂ.ಪಾಟೀಲ, ಉಪಾಧ್ಯಕ್ಷ ಸದಾಶಿವ ಮಾಗಿ, ರಾಜಶೇಖರ ಮೇಗೇರಿ, ಎಂ.ಬಿ.ಸಗರಿ, ಎಸ್.ಎಂ.ಚಿತ್ತರಗಿ, ಬಿ.ಡಿ.ಬೇಲಾಳ, ಚಂದ್ರಶೇಖರ ಇಟಗಿ, ಎಸ್.ಎ.ಹಾವರಗಿ, ಎಚ್.ಬಿ.ದಳವಾಯಿ, ವೈ.ವೈ.ಮುತ್ತತ್ತಿ, ಡಾ.ಎಸ್.ವ್ಹಿ.ಒಡ್ಡೊಡಗಿ, ಆರ್.ಜಿ.ಧನಶೆಟ್ಟಿ, ಬಸವರಾಜ ಲಿಂಗದಳ್ಳಿ, ಎ.ಎಚ್.ಬಿರಾದಾರ, ಡಿ.ಬಿ.ಓಲೇಕಾರ, ಎಸ್.ಆರ್.ಗೌಡರ, ಎಸ್.ಎಸ್.ಭೂತಲ, ಮಹಾದೇವಿ ಕಂಠಿ, ಎಚ್.ಎಸ್.ಪಾಟೀಲ್ ಹಾಗೂ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

ಗ್ಯಾರಂಟಿ ಯೋಜನೆ... | ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ | ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ

ಯೋಜನೆಗಳ ಅನುಷ್ಠಾನಕ್ಕೆ ಬಬಲೇಶ್ವರ ಪ್ರಥಮ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದಲ್ಲಿ ಬಬಲೇಶ್ವರ ಮತಕ್ಷೇತ್ರ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ತಿಕೋಟಾ ತಾಲೂಕಿನ ಮಲಕನದೇವರ ಹಟ್ಟಿ ಗ್ರಾಮದಲ್ಲಿ ಬುಧವಾರ ಲೋಕೋಪಯೋಗಿ ಇಲಾಖೆಯಿಂದ ₹ 100 ಲಕ್ಷ ವೆಚ್ಚದಲ್ಲಿ ನಿರ್ಮಿಸುತ್ತಿರುವ ಸೋಮದೇವರಹಟ್ಟಿ- ಮಲಕನದೇವರಹಟ್ಟಿ ವರೆಗೆ ಮೂಲಸೌಕರ್ಯ ಅಭಿವೃದ್ಧಿ ಅನುದಾನದಲ್ಲಿ ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಸರಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳನ್ನು ಎಲ್ಲ ಫಲಾನುಭವಿಗಳಿಗೆ ತಲುಪಿಸಲಾಗಿದೆ ಎಂದು ಅವರು ಹೇಳಿದರು.



ನೀರಾವರಿ ಮತ್ತು ಕೋಟಿ ವೃಕ್ಷ ಅಭಿಯಾನದ ಪರಿಣಾಮ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಈ ಬಾರಿ ವಿಜಯಪುರ ಜಿಲ್ಲೆಯಲ್ಲಿ ಉಷ್ಣಾಂಶ 40 ಡಿ. ಸೆ. ದಾಟಿಲ್ಲ. ಮಲಕನದೇವರಹಟ್ಟಿ ಗ್ರಾಮದ 2 ಕೆರೆಗಳ ಕಾಮಗಾರಿ ಪೂರ್ಣಗೊಂಡಿದೆ. ಮುಂಬರುವ ದಿನಗಳಲ್ಲಿ ನೀರು ತುಂಬಿಸಲಾಗುವುದು. ಬಾಬಾನಗರ ಬಳಿ ಸುಮಾರು ಒಂದು ಟಿಎಂಸಿ ಸಾಮರ್ಥ್ಯದ ಡ್ಯಾಂ ನಿರ್ಮಿಸಲಾಗುತ್ತಿದ್ದು, ಮೂರ್ನಾಲ್ಕು ತಿಂಗಳಲ್ಲಿ ಡಿಪಿಆರ್ ಮತ್ತು ಟೆಂಡರ್ ಪ್ರಕ್ರಿಯೆ ಮುಗಿಯಲಿದೆ.ಅದರ ನಂತರ ಡ್ಯಾಂ ಕಾಮಗಾರಿ ಪ್ರಾರಂಭವಾಗಿ ನಿಗದಿತ ಸಮಯದಲ್ಲಿ ಪೂರ್ಣವಾಗಲಿದೆ. ಇದರಿಂದ ಬೇಸಿಗೆಯಲ್ಲಿ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ. ಈಗ ಭೂಮಿಪೂಜೆ ನೆರವೇರಿಸಲಾದ ರಸ್ತೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು. ಇಲ್ಲಿನ ಸಮುದಾಯ ಭವನಕ್ಕೆ ಅನುದಾನ ಒದಗಿಸಲಾಗುವುದು ಎಂದು ಸಚಿವರು ತಿಳಿಸಿದರು.

ಜಿ.ಪಂ. ಮಾಜಿ ಅಧ್ಯಕ್ಷ ಸೋಮನಾಥ ಬಾಗಲಕೋಟ ಮಾತನಾಡಿ, ಸಚಿವ ಎಂ.ಬಿ.ಪಾಟೀಲರವರು ಈ ಭಾಗದಲ್ಲಿ ರಸ್ತೆ ಮತ್ತು ನೀರಾವರಿ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು.

ವಿದ್ಯಾಧರ ಹಿರೇಮಠ, ದಯಾನಂದ ಹಿರೇಮಠ, ಜಗದೀಶ ವಳಸಂಗ, ಚನ್ನಪ್ಪ ದಯಗೊಂಡ, ರಮೇಶ ಜಂಬಗಿ, ಮಲ್ಲಪ್ಪ ರಾಮೋಜಿ, ರವಿ ಹಿರೇಮಠ, ನಿಂಗವ್ವ ನಿಡೋಣಿ, ಭೀಮವ್ವ ಜಂಬಗಿ, ಸಿದ್ದು ಗೌಡನವರ, ನೀರಾವರಿ ನಿಗಮದ ಎಇಇ ಅಂಬಣ್ಣ ಹರಳಯ್ಯ, ಲೋಕೋಪಯೋಗಿ ಇಲಾಖೆ ಎಇಇ ಪ್ರಮೋದ ಹಟ್ಟಿ ಉಪಸ್ಥಿತರಿದ್ದರು.

ಸಂಸ್ಕಾರಯುತ ಬದುಕಿಗೆ ವೈದಿಕ ಶಿಬಿರ ಮುನ್ನುಡಿ

ಮಹಾಂತಲಿಂಗ ಶಿವಾಚಾರ್ಯ ಶ್ರೀ | ವೈದಿಕ ಸಂಸ್ಕಾರ ಶಿಬಿರ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ತಾಳಿಕೋಟೆ

ವೈದಿಕ ಸಂಸ್ಕಾರ ಶಿಬಿರಗಳು ಸಾಮಾನ್ಯವಾಗಿ ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿ ಮತ್ತು ಧಾರ್ಮಿಕ ಮೌಲ್ಯಗಳನ್ನು ಬೆಳೆಸುವ ಬೇಸಿಗೆ ಶಿಬಿರಗಳಾಗಿವೆ. ಈ ಶಿಬಿರದಿಂದ ಮೌಲ್ಯಯುತ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ತುಂಬಗಿ-ಸಾಸನೂರ ಹಿರೇಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ನುಡಿದರು.ತಾಲೂಕಿನ ಚಬನೂರ ಗ್ರಾಮದ ರಾಮಲಿಂಗೇಶ್ವರ ಮಠದ ಧರ್ಮಾಧಿಕಾರಿ ರಾಮಲಿಂಗಯ್ಯ ಸ್ವಾಮೀಜಿ ನೇತೃತ್ವದಲ್ಲಿ ಮೇ ತಿಂಗಳಲ್ಲಿ ರಾಮಲಿಂಗೇಶ್ವರ ವೈದಿಕ ಸಂಸ್ಕಾರ ಶಿಬಿರದ ಪ್ರಾರಂಭೋತ್ಸವದಲ್ಲಿ ಮಾತನಾಡಿದರು. ಈ ಶಿಬಿರದಲ್ಲಿ ಮಕ್ಕಳಿಗೆ ಇಷ್ಟಲಿಂಗ ಪೂಜೆ, ಶಿವಯೋಗ ಸಾಧನೆ ಮತ್ತು ಪೂಜಾ ವಿಧಿವಿಧಾನಗಳನ್ನು ಕಲಿಸಲಾಗುತ್ತದೆ. ವೈದಿಕ ಸಂಸ್ಕಾರ, ಧಾರ್ಮಿಕ ಆಚರಣೆಗಳು ಮತ್ತು ಇಷ್ಟಲಿಂಗ ಪೂಜೆ ಬಗ್ಗೆ ಜ್ಞಾನ ನೀಡುವುದು, ವೇದ, ಪಠಣ, ಯೋಗ, ಒಳಗೊಂಡು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಧಾರ್ಮಿಕ ಹಿನ್ನೆಲೆ ಬಲಪಡಿಸುವ ಅಂಶಗಳನ್ನು ಈ ಶಿಬಿರದಲ್ಲಿ ಕಲಿಸಲಾಗುತ್ತಿದೆ ಎಂದರು.

ರಾಮಲಿಂಗಯ್ಯ ಸ್ವಾಮೀಜಿ ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳಲ್ಲಿಸಂಸ್ಕಾರವೆಂಬುದು ಮರೆತು ಹೋಗಿದೆ. ಕೆಲವು ಪಾಲಕರು ಶಿಕ್ಷಣಕೊಡಿಸುವ ಬರದಲ್ಲಿ ಮಕ್ಕಳಲ್ಲಿ ಸಂಸ್ಕಾರ ಎಂಬುವುದನ್ನು ಕಲಿಸುವುದನ್ನು ಮರೆತಿದ್ದಾರೆ. ಶಿಬಿರದಲ್ಲಿ ಕಾಶಿಯ ವೇದ ಪಂಡಿತರಿಂದ ಹಾಗೂ ಶ್ರೀಶೈಲ ವೇದ ಮತ್ತು ಜ್ಯೋತಿಷ್ಯ ಪಂಡಿತರಿಂದ ವಾರಕ್ಕೊಮ್ಮೆ ವಿಶೇಷ ಭೋದನಾ ಶಿಬಿರ ನಡೆಯಲಿದೆ.



ನಿತ್ಯ ಕುಂಟೋಜಿಯ ವೈದಿಕ ಶಾಸ್ತ್ರಿಗಳಾದ ವಿರೇಶ ಹಿರೇಮಠ, ಪ್ರದೀಪ ಹಿರೇಮಠ, ಗಿರೀಶ ಹಿರೇಮಠ ಬೋಧಿಸುತ್ತಿದ್ದಾರೆ. ನಿತ್ಯ ದಾಸೋಹದ ಜತೆಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ ಎಂದರು. ಶಿಬಿರಾರ್ಥಿಗಳ ಪಾಲಕರು ಇದ್ದರು.

ಒಂದೇ ಭಾರತ ರೈಲು ಸಂಚಾರ ವಿಜಯಪುರದಲ್ಲಿ ಸಂಚರಿಸಲು ಜಿಲ್ಲೆಯ ಸಾರ್ವಜನಿಕರ ಬಹುದಿನಗಳ ಬೇಡಿಕೆ ಆಗಿದ್ದು, ಕಲಬುರಗಿ, ಹುಬ್ಬಳ್ಳಿ, ಬೆಳಗಾವಿಯಲ್ಲಿ ಸದ್ಯ ರೈಲು ಸಂಚರಿಸುತ್ತಿದೆ. ಶೀಘ್ರ ವಿಜಯಪುರದಲ್ಲೂ ಸಂಚರಿಸಲಿದೆ.

• **ರಮೇಶ ಜಿಗಜಿಣಗಿ** ಸಂಸದ ವಿಜಯಪುರ

ಸುದ್ದಿ ಸಿಂಚನ

ಐಜಿಪಿಯಾಗಿ ಸಂದೀಪ್ ಪಾಟೀಲ ನೇಮಕ



ಬೆಳಗಾವಿ: ರಾಜ್ಯ ಸರ್ಕಾರ ಹಿರಿಯ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ ಅವರನ್ನು ಬೆಳಗಾವಿ ಉತ್ತರ ವಲಯದ ಇನ್ಸ್‌ಪೆಕ್ಟರ್‌ಜನರಲ್ ಆಫ್ ಪೊಲೀಸ್ (ಐಜಿಪಿ) ಆಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಇದಕ್ಕೂ ಮೊದಲು ಡಾ.ಚೇತನಸಿಂಗ್ ರಾಥೋಡ್ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರನ್ನು ಸಿಐಡಿ ವಿಭಾಗದ ಆರ್ಥಿಕ ಅಪರಾಧಗಳ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ಆ ಹುದ್ದೆ ಈವರೆಗೆ ಖಾಲಿಯಿತ್ತು. ಸಂದೀಪ್ ಪಾಟೀಲ ಅವರು ಈ ಹಿಂದೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಪಡೆಯ ಐಜಿಪಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಅದಕ್ಕೂ ಮೊದಲು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಸ್‌ಪಿ) ಕಾರ್ಯನಿರ್ವಹಿಸಿದ್ದ ಅವರು ಜನಸ್ನೇಹಿ ಪೊಲೀಸ್ ವ್ಯವಸ್ಥೆ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಇಂದು ಕಸಾಪ ಸಂಸ್ಥಾಪನಾ ದಿನಾಚರಣೆ

ಬಸವನಬಾಗೇವಾಡಿ: ಪಟ್ಟಣದ ಬಸವೇಶ್ವರ ದೇವಾಲಯದ ಉದ್ಯಾನವನದಲ್ಲಿ ಮೇ.7ರಂದು ಇಳಿಹೊತ್ತು 4.30 ಗಂಟೆಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಹಮ್ಮಿಕೊಂಡಿದೆ. ತಾಲೂಕು ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ ಅಧ್ಯಕ್ಷತೆ ವಹಿಸುವರು. ನಿವೃತ್ತ ಮುಖ್ಯ ಶಿಕ್ಷಕ ಸಿ.ಎಲ್.ಮುರಾಳ ಉದ್ಘಾಟಿಸುವರು. ತಾಲೂಕು ಕಸಾಪ ಮಹಿಳಾ ಪ್ರತಿನಿಧಿ ಮಹಾದೇವಿ ಬಿರಾದಾರ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ವಿಶ್ರಾಂತ ಶಿಕ್ಷಕ ಎಸ್.ಕೆ. ಸೋಮನಕಟ್ಟಿ, ನಿವೃತ್ತ ಉಪನ್ಯಾಸಕ ಎಸ್.ಬಿ.ಅಂಕದ, ತಾಲೂಕು ಕಸಾಪ ಪದಾಧಿಕಾರಿಗಳಾದ ಎಂ.ಎನ್. ಅಂಗಡಗೇರಿ, ಬಸವರಾಜ ಮೇಟಿ, ವಾಸು ಮ್ಯಾಗೇರಿ ಆಗಮಿಸುವರು ಎಂದು ತಾಲೂಕು ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ ತಿಳಿಸಿದ್ದಾರೆ.

ನಾಯಿ ದಾಳಿಗೆ ಒಳಗಾದ ಬಾಲಕನ ಭೇಟಿ ಮಾಡಿದ ಡಿಸಿ

ಮಗುವಿನ ಆರೋಗ್ಯ ವಿಚಾರಣೆ | ಸೂಕ್ತ ಚಿಕಿತ್ಸೆ ನೀಡಲು ವೈದ್ಯರಿಗೆ ಸಲಹೆ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಮಹಾನಗರ ಪಾಲಿಕೆ ವ್ಯಾಪ್ತಿಯ 35ನೇ ವಾರ್ಡ್‌ನ ರಾಜಕುಮಾರ ಲೇಔಟ್ ನಲ್ಲಿ ಬೀದಿ ನಾಯಿ ಕಡಿತಕ್ಕೊಳಗಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಗುವನ್ನು ಭೇಟಿ ಮಾಡಿದ ಜಿಲ್ಲಾಧಿಕಾರಿ ಡಾ.ಆನಂದ.ಕೆ ಅವರು ಮಗುವಿನ ಆರೋಗ್ಯ ವಿಚಾರಿಸಿ, ಸೂಕ್ತ ಚಿಕಿತ್ಸೆ ನೀಡಲು ವೈದ್ಯರಿಗೆ ಸಲಹೆ ನೀಡಿದರು.

ರಾಜಕುಮಾರ ಲೇಔಟ್ ನಿವಾಸಿಯಾಗಿರುವ 3 ವರ್ಷದ ವಿರಾಜ ಸಂತೋಷ ಬಿರಾದಾರ ಮಂಗಳವಾರ ನಾಯಿ ಕಡಿತಕ್ಕೆ ಒಳಗಾಗಿದ್ದರಿಂದ ಆತನನ್ನು ಪೋಷಕರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಸುದ್ದಿ ತಿಳಿದ ಜಿಲ್ಲಾಧಿಕಾರಿಗಳು, ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ, ನಾಯಿ ಕಡಿತಕ್ಕೊಳಗಾದ ಮಗುವಿನ ಆರೋಗ್ಯ ವಿಚಾರಿಸಿದ ಬಳಿಕ ಮಾತನಾಡಿ, ಮಗು ಔಷಧಿಗೆ ಸ್ಪಂದಿಸುತ್ತಿದ್ದು, ಚೇತರಿಸಿಕೊಂಡು ಮಾತನಾಡುತ್ತಿದ್ದಾನೆ. ಹಾಗಾಗಿ ಪೋಷಕರು ಆತಂಕಕ್ಕೊಳಗಾಗಬೇಕಿಲ್ಲ ಎಂದರು. ಜೊತೆಗೆ ಬಾಲಕನಿಗೆ ರೇಬೀಸ್ ವಿರೋಧಿ ಲಸಿಕೆಗಳನ್ನು ನೀಡಲಾಗುತ್ತದೆ. ಜಿಲ್ಲಾಸ್ಪತ್ರೆಯಿಂದಲೂ ಸೂಕ್ತ ಲಸಿಕೆಯನ್ನು ಪಡೆಯಲಾಗುತ್ತಿದೆ. ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದಿಂದ ಆಸ್ಪತ್ರೆಗೆ ಭೇಟಿ ನೀಡಿ, ಸಮರ್ಪಕ ಸ್ಪಂದಿಸಲಾಗಿದೆ ಎಂದರು.

ಬೀದಿ ನಾಯಿ ಹಿಡಿಯಲು, ಪುನರ್ ವ್ಯವಸ್ಥೆ: ರಾಜಕುಮಾರ ಬಡಾವಣೆಯಲ್ಲಿ ಬೀದಿ ನಾಯಿಗಳ ಹಾವಳಿ ಅಧಿಕವಾಗಿದ್ದು, ನಾಯಿಗಳನ್ನು ಹಿಡಿದು ಪುನರ್ ವ್ಯವಸ್ಥೆ (ಡಾಗ್ ಶೆಲ್ಟರ್) ಪಾಲಿಕೆಯಿಂದ ವ್ಯವಸ್ಥೆ ಮಾಡಲಾಗುವುದು. ಈ ಕುರಿತು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಇದೇ ವೇಳೆ ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ರಾಜು ಕುರಿಯವರ, ಪಾಲಿಕೆ ಉಪಆಯುಕ್ತ ಮಹಾವೀರ ಬೋರಣ್ಣವರ ಸೇರಿದಂತೆ ಖಾಸಗಿ ಆಸ್ಪತ್ರೆ ವೈದ್ಯರು, ಸಿಬ್ಬಂದಿ ಹಾಗೂ ಪಾಲಿಕೆ ಸಿಬ್ಬಂದಿ ಉಪಸ್ಥಿತರಿದ್ದರು.



ಬೀದಿನಾಯಿ ಸೆರೆಹಿಡಿದ ಮಹಾನಗರ ಪಾಲಿಕೆ ಸಿಬ್ಬಂದಿ

• **ಕನ್ನಡಪ್ರಭ ವಾರ್ತೆ** ವಿಜಯಪುರ

ನಗರದ ರಾಜಕುಮಾರ ಲೇಔಟ್‌ನಲ್ಲಿ ಮಂಗಳವಾರ ಸಂಜೆ ಮೂರು ವರ್ಷದ ಬಾಲಕ ವಿರಾಜ ಬಿರಾದಾರ ಎಂಬಾತನ ಮೇಲೆ ದಾಳಿ ಮಾಡಿದ್ದ ಬೀದಿ ನಾಯಿಯನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಬುಧವಾರ ಬೆಳಗ್ಗೆ ಸೆರೆ ಹಿಡಿದಿದ್ದಾರೆ.

ಬಾಲಕನ ಬೆನ್ನಿಗೆ ಹಾಗೂ ತೊಡೆಗೆ ಕಚ್ಚಿ ಗಾಯಗೊಳಿಸಿದ್ದ ಬೀದಿ ನಾಯಿಯನ್ನು ಬೆಳಗ್ಗೆಯಿಂದಲೇ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ಸೆರೆ ಹಿಡಿದರು. ಸೆರೆ ಹಿಡಿಯುವ ವೇಳೆ ಬೀದಿನಾಯಿ ಪಾಲಿಕೆ ಸಿಬ್ಬಂದಿಗೂ ಕಚ್ಚಲು ಪ್ರಯತ್ನಿಸಿದ ಘಟನೆ ಜರುಗಿತು. ಬಳಿಕ ಬೀದಿ ನಾಯಿಯ ಬಾಯಿ ಹಾಗೂ ಕಾಲುಗಳನ್ನು ಕಟ್ಟಿ ಹಾಕಿ ಪಾಲಿಕೆ ವಾಹನದಲ್ಲಿ ಶೆಲ್ಟರ್‌ಗೆ ಸಾಗಿಸಲಾಯಿತು.

ಕಳೆದ ಹಲವು ದಿನಗಳಿಂದ ರಾಜಕುಮಾರ ಲೇಔಟ್ ನಲ್ಲಿ ಜನರಿಗೆ ತಲೆ ನೋವಾಗಿದ್ದ ಬೀದಿ ನಾಯಿಯನ್ನು ಇಂದು ಸೆರೆ ಹಿಡಿಯಲಾಗಿದೆ. ಆದರೆ, ಏನಾದರೂ ಅನಾಹುತಗಳು ಜರುಗಿದಾಗ ಮಾತ್ರ ಬರುವ ಪಾಲಿಕೆಯವರು ಅವಘಡಕ್ಕೂ ಮೊದಲೇ ನಿರಂತರವಾಗಿ ಕಾರ್ಯಾಚರಣೆ ಮಾಡಿದರೆ ಬೀದಿನಾಯಿಗಳ ಕಾಟಕ್ಕೆ ತಡೆ ಹಾಕಬಹುದು ಎಂಬುವುದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದರು.

ನಾಡಗೌಡರಿಗೆ ಸಚಿವ ಸ್ಥಾನ ನೀಡೋದು ನ್ಯಾಯಸಮ್ಮತ

ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಕುಂಟೋಜಿ



• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಪಕ್ಷನಿಷ್ಠೆಗೆ ಹೆಸರಾದ, ಮುದ್ದೇಬಿಹಾಳ ಮತಕ್ಷೇತ್ರದಲ್ಲಿ ಅಜಾತಶತ್ರುವಾಗಿ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹಿರಿಯ ನಾಯಕ ಸಿ.ಎಸ್.ನಾಡಗೌಡ ಅವರಿಗೆ ಸಚಿವ ಸ್ಥಾನ ನೀಡುವುದು ನ್ಯಾಯ ಸಮ್ಮತವಾಗಿದೆ ಎಂದು ಯುವ ಕಾಂಗ್ರೆಸ್ ಹಾಗೂ ಎನ್‌ಎಸ್‌ಯುಐ ಘಟಕಗಳು ರಾಜ್ಯ ಸರ್ಕಾರಕ್ಕೆ ಮತ್ತು ಕಾಂಗ್ರೆಸ್ ಹೈಕಮಾಂಡ್‌ಗೆ ಭಿನ್ನವಿಸಿಕೊಂಡಿವೆ.

ಇಲ್ಲಿನ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ನಾಡಗೌಡರ ಸುದೀರ್ಘ ರಾಜಕೀಯ ಸೇವೆ ಹಾಗೂ ಪಕ್ಷ ಸಂಘಟನೆಯ ಬಗ್ಗೆ ಎಳೆಎಳೆಯಾಗಿ ಬಿಡಿಸಿಟ್ಟರು.

ಕರ್ನಾಟಕ ಎನ್ ಎಸ್ ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಸದ್ದಾಂ ಕುಂಟೋಜಿ ಮಾತನಾಡಿ, 1989 ಮೊದಲು ಬಾರಿಗೆ ನಾಡಗೌಡ ಶಾಸಕರಾಗಿ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿ ಮುದ್ದೇಬಿಹಾಳವನ್ನು ಕಾಯುತ್ತಿರುವ ಕೆ.ಎಸ್.ಡಿ.ಎಲ್ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡರು ಹೈಕಮಾಂಡ್‌ನ ನಿಷ್ಠಾವಂತ ಸಿಪಾಯಿ. 2013ರಲ್ಲೇ ಅವರಿಗೆ ಮಂತ್ರಿ ಸ್ಥಾನ ದಕ್ಕಬೇಕಿತ್ತು, ಆದರೆ, ಅನಿವಾರ್ಯ ಕಾರಣಗಳಿಂದ ಅದು ಕೈತಪ್ಪಿದ್ದು ಇಡೀ ಜಿಲ್ಲೆಯ ಕಾರ್ಯಕರ್ತರಿಗೆ ಅತೀವ ನೋವುತಂದಿತ್ತು. ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರು ಹಳೆಯ ಅನ್ಯಾಯವನ್ನು ಸರಿಪಡಿಸಿ, ನಾಡಗೌಡರಿಗೆ ಅರ್ಹ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಶಾಸಕ ಸಿ.ಎಸ್.ನಾಡಗೌಡರು ಅಪ್ಪಾಜಿ ಅವರು, ರಾಜವಂಶದ ಹಿನ್ನೆಲೆಯಿಂದ ಬಂದರೂ ಎಂದಿಗೂ ಬಡವ-ಶ್ರೀಮಂತ, ಮೇಲು-ಕೀಳು ಎಂಬ ತಾರತಮ್ಯ ಮಾಡಿದವರಲ್ಲ. ಬಡವರು, ದಲಿತರು ಹಾಗೂ ಹಿಂದುಳಿದವರ ಕಣ್ಣೀರೊರೆಸುವ ಮೂಲಕ ಅವರು ಅಪ್ಪಾಜಿ ಎಂದೇ ಜನಪ್ರಿಯರಾಗಿದ್ದಾರೆ. ಇಂತಹ ನಾಯಕರಿಗೆ ಸಚಿವ ಸ್ಥಾನ ನೀಡಿದರೆ ಇಡೀ ವಿಜಯಪುರ ಜಿಲ್ಲೆಗೆ ಹಾಗೂ ಉತ್ತರ ಕರ್ನಾಟಕಕ್ಕೆ ಆನೆಬಲ ಬಂದಂತಾಗುತ್ತದೆ ಎಂದರು.

ಯುವ ಕಾಂಗ್ರೆಸ್ ಮುಖಂಡ ಸಿಂಕದರ್ ಜ್ವಾನೇಕಾರ ಮಾತನಾಡಿ, ಶಾಸಕ ಸಿಎಸ್ ನಾಡಗೌಡರ ಅನುಭವ ಸರ್ಕಾರಕ್ಕೆ ಆಸ್ತಿಯಾಗಲಿದೆ. ಸಚಿವ ಸ್ಥಾನದ ಬೇಡಿಕೆಯನ್ನು ಹೈಕಮಾಂಡ್ ಗಮನಕ್ಕೆ ತರಲು ಶೀಘ್ರದಲ್ಲೇ ಪಕ್ಷದ ಹಿರಿಯ ನಾಯಕರಬಳಿನಿಯೋಗಕೊಂಡೊಯ್ಯಲಾಗುವುದು ಎಂದರು. ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಫೀಕ್ ಶಿರೋಳ, ತಾಲ್ಲೂಕು ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಾಕೀರ್‌ಮೂಲಿಮನಿ, ರಾಮಣ್ಣ ನಾಯಕಮಕ್ಕಳು ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ಬಾಲಕನ ಪ್ರಾಣ ಉಳಿಸಿದ ಆರ್‌ಕೆಎಂ ವೈದ್ಯರ ತಂಡ

ಸೈಕಲ್ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ 9 ವರ್ಷದ ಬಾಲಕ

• **ಕನ್ನಡಪ್ರಭ ವಾರ್ತೆ** ವಿಜಯಪುರ




ಸೈಕಲ್ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ 9 ವರ್ಷದ ಬಾಲಕನನ್ನು ನಗರದ ಆರ್‌ಕೆಎಂ ಆಸ್ಪತ್ರೆಯ ವೈದ್ಯಕೀಯ ತಂಡವು ಸಂಕೀರ್ಣ ಶಸ್ತ್ರಚಿಕಿತ್ಸೆ ಮಾಡುವ ಮೂಲಕ ಬಾಲಕನನ್ನು ಸಾವಿನ ದವಡೆಯಿಂದ ಪಾರುಮಾಡಿದೆ.

ಗಂಭೀರವಾಗಿ ಗಾಯಗೊಂಡಿದ್ದ ಬಾಲಕನನ್ನು ಆಸ್ಪತ್ರೆಗೆ ದಾಖಲಿಸಿದಾಗ ಆತನ ಹೊಟ್ಟೆಯೊಳಗೆ ಅತಿಯಾದ ರಕ್ತಸ್ರಾವ, ಯಕೃತ್ತಿನ ನಾಲ್ಕನೇ ಹಂತದ ಗಂಭೀರ ಗಾಯಗಳು, ಪಿತ್ತರಸ ಸೋರಿಕೆ, ಮೆಸೆಂಟರಿಕ್ ಟಿಯರ್ ಹಾಗೂ ಶ್ವಾಸಕೋಶದ ಭಾಗದಲ್ಲಿ ರಕ್ತ ಸಂಗ್ರಹವಾಗುವಂತಹ ಪ್ರಾಣಾಪಾಯದ ಲಕ್ಷಣಗಳು ಕಂಡುಬಂದಿದ್ದವು. ಈ ವೇಳೆ ನವಜಾತ ಶಿಶು ಮತ್ತು ಮಕ್ಕಳ ತಜ್ಞ ಡಾ. ಸುರೇಂದ್ರ ಅಗರವಾಲ, ಅರಿವಳಿಕೆ ತಜ್ಞ ಡಾ. ಮೀನಲ್ ಅಗರವಾಲ, ಮಕ್ಕಳ ತಜ್ಞ ಡಾ.ಆದರ್ಶ ಬಗಲಿ, ಡಾ.ಲೋಕೇಶ ಅಹಿರಸಂಗ, ಡಾ.ಸಾಗರ ತಂಡ ಹಾಗೂ ಇತರ ವೈದ್ಯರ ನೇತೃತ್ವದಲ್ಲಿ ಅತ್ಯಂತ ಸವಾಲಿನ ತುರ್ತು ಶಸ್ತ್ರಚಿಕಿತ್ಸೆ ಮಾಡಿ ಮಗುವಿನ ಪ್ರಾಣ ಉಳಿಸಲಾಗಿದೆ.

ಆರ್‌ಕೆಎಂ ಆಸ್ಪತ್ರೆ ಪ್ರಧಾನ ಕಾರ್ಯದರ್ಶಿ ಶಂಭುಲಿಂಗಯ್ಯ ಕರ್ಪೂರಮಠ ಮಾತನಾಡಿ, ಒಂದು ಎಳೆಯ ಜೀವವನ್ನು ಉಳಿಸಲು ನಮ್ಮ ವೈದ್ಯಕೀಯ ತಂಡವು ತೋರಿದ ಅಪ್ರತಿಮ ಬದ್ಧತೆ ಮತ್ತು ಕ್ಷಿಪ್ರ ಕಾರ್ಯತತ್ಪರತೆ ನಮಗೆ ಹೆಮ್ಮೆ ತಂದಿದೆ. ಸಂಕೀರ್ಣ ಮತ್ತು ತುರ್ತು ಪರಿಸ್ಥಿತಿಯಲ್ಲಿ ನಮ್ಮ ವೈದ್ಯರು ತೋರಿದ ವೃತ್ತಿಪರತೆ ಮತ್ತು ಮಾನವೀಯ ಕಾಳಜಿ ಶ್ಲಾಘನೀಯ. ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನ ಹಾಗೂ ಪರಿಣಿತ ವೈದ್ಯರ ಸಕಾಲಿಕ ಸ್ಪಂದನೆಯಿಂದ ಮಾತ್ರ ಇಂತಹ ಪವಾಡ ಸದೃಶ್ಯ ಶಸ್ತ್ರಚಿಕಿತ್ಸೆ ಸಾಧ್ಯವಾಗಿದೆ. ಮಗುವಿಗೆ ಮರುಜನ್ಮ ನೀಡಿದ ಇಡೀ ತಂಡದ ಶ್ರಮಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇರೀತಿ ಬಾಲಕನ ಪೋಷಕರು ಮತ್ತು ಸಂಬಂಧಿಕರು ವೈದ್ಯರ ತಂಡಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದ್ದಾರೆ ಎಂದರು. ಡಾ.ಸುರೇಂದ್ರ ಅಗರವಾಲ ಮಾತನಾಡಿ, ಇದು ಸಮಯದ ವಿರುದ್ಧದ ಹೋರಾಟವಾಗಿತ್ತು. ಪ್ರತಿಯೊಂದು ಸೆಕೆಂಡ್ ಕೂಡ ಮಗುವಿನ ಜೀವಕ್ಕೆ ಮುಖ್ಯವಾಗಿತ್ತು. ನಿಖರವಾದ ಶಸ್ತ್ರಚಿಕಿತ್ಸೆ ಮತ್ತು ತಂಡದ ಸಮನ್ವಯತೆಯೇ ಈ ಯಶಸ್ಸಿಗೆ ಕಾರಣವಾಗಿದೆ. ಶಸ್ತ್ರಚಿಕಿತ್ಸೆಯ ನಂತರ ಮಗುವಿಗೆ ಐಸಿಯುನಲ್ಲಿ ಉನ್ನತ ಮಟ್ಟದ ಚಿಕಿತ್ಸೆ ಮತ್ತು ಪೌಷ್ಟಿಕಾಂಶದ ಬೆಂಬಲ ನೀಡಲಾಗುತ್ತಿದೆ. ಮಗು ಈಗ ದಿನೇ ದಿನೇ ಚೇತರಿಸಿಕೊಳ್ಳುತ್ತಿದೆ. ಈ ಪ್ರಕರಣವು ಆರ್‌ಕೆಎಂ ಆಸ್ಪತ್ರೆಯ ಮಕ್ಕಳ ತುರ್ತು ಚಿಕಿತ್ಸಾ ವಿಭಾಗದ ಅತ್ಯುತ್ತಮ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಶೀಘ್ರದಲ್ಲೇ ಒಂದೇ ಭಾರತ ರೈಲು: ಸಂಸದ ರಮೇಶ ಜಿಗಜಿಣಗಿ



ವಿಜಯಪುರ: ಒಂದೇ ಭಾರತ ರೈಲು ಸಂಚಾರ ವಿಜಯಪುರದಲ್ಲಿ ಸಂಚರಿಸಲು ಜಿಲ್ಲೆಯ ಸಾರ್ವಜನಿಕರ ಬಹುದಿನಗಳ ಬೇಡಿಕೆ ಆಗಿದ್ದು, ಕಲಬುರಗಿ, ಹುಬ್ಬಳ್ಳಿ, ಬೆಳಗಾವಿಯಲ್ಲಿ ಸದ್ಯ ರೈಲು ಸಂಚರಿಸುತ್ತಿದೆ. ಆದರೆ, ವಸ್ತುಸ್ಥಿತಿ ಸಾರ್ವಜನಿಕರು ಅರ್ಥ ಮಾಡಿಕೊಳ್ಳಬೇಕು. ಸೊಲ್ಲಾಪುರ, ಬಿಜಾಪುರ, ಗದಗ, ಹುಬ್ಬಳ್ಳಿಯ ವರೆಗೆ ರೈಲು ಮಾರ್ಗ ಕಾಮಗಾರಿ ಪೂರ್ಣಗೊಂಡಿಲ್ಲ. ಸದ್ಯ ಓಡುತ್ತಿರುವ ರೈಲಿನ ವೇಗವು 92 ರಿಂದ 100ರ ವರೆಗೆ ಇರುತ್ತದೆ. ಆದರೆ, ಒಂದೇ ಭಾರತ ರೈಲಿನ ವೇಗ 110 ರಿಂದ 140ರ ವೇಗವಾಗಿದೆ. ಆದ ಕಾರಣ ರೈಲಿನ ಮಾರ್ಗ ಕಾಮಗಾರಿಯಲ್ಲಿದ್ದು, ಈ ರೈಲು ಚಾಲನೆಯಾದರೆ ಏನಾದರೂ ಸಮಸ್ಯೆ ಆಗಬಾರದೆಂಬ ಹಿನ್ನೆಲೆ ಒಂದೇ ಭಾರತ ರೈಲು ಸಂಚಾರ ಮಾಡುವುದು ವಿಳಂಬವಾಗುತ್ತಿದೆ. ರೈಲು ಮಾರ್ಗ 2-3 ತಿಂಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಮುಗಿದ ನಂತರ ಈ ರೈಲು ಸಂಚರಿಸಲು ಚಾಲನೆಯಾಗುತ್ತದೆ. ಯಾವುದೇ ರೀತಿಯ ತಪ್ಪು ಗ್ರಹಿಕೆಗೆ ಅಂಟಿಕೊಳ್ಳದೇ ರೈಲಿನ ಕುರಿತ ಅಪಪ್ರಚಾರ ಮಾಡಬಾರದು ಎಂದು ಸಂಸದ ರಮೇಶ ಜಿಗಜಿಣಗಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಮುದ್ದೇಬಿಹಾಳದಲ್ಲಿ ಕಾಂಗ್ರೆಸ್ ವಿಜಯೋತ್ಸವ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಬಾಗಲಕೋಟೆ, ದಾವಣಗೆರೆ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಮುನ್ನಡೆ ಹಾಗೂ ಕೇರಳ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಭರ್ಜರಿ ಯಶಸ್ಸ ನಮಗೆ ಸಂತೋಷವಾಗಿದೆ ಎಂದು ಎನ್ ಎಸ್ ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಸದ್ದಾಂ ಕುಂಟೋಜಿ ತಿಳಿಸಿದರು.

ಪಟ್ಟಣದ ಬಸವೇಶ್ವರ ಸರ್ಕಲ್‌ನಲ್ಲಿ ಮುದ್ದೇಬಿಹಾಳ ವಿಧಾನಸಭಾ ಮತಕ್ಷೇತ್ರದ ಘೆಖಖಿಐ, ಯುವ ಕಾಂಗ್ರೆಸ್ ಹಾಗೂ ಮಹಿಳಾ ಕಾಂಗ್ರೆಸ್ ವತಿಯಿಂದ ಮಂಗಳವಾರ ಆಯೋಜಿಸಿದ್ದ ಅದ್ಧೂರಿ ವಿಜಯೋತ್ಸವದಲ್ಲಿ ಮಾತನಾಡಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ಮುಖಂಡರು ಹಾಗೂ ಕಾರ್ಯಕರ್ತರು, ಬಾಗಲಕೋಟೆ ಅಭ್ಯರ್ಥಿ ಉಮೇಶ್ ಮೇಟಿ ಹಾಗೂ ದಾವಣಗೆರೆ ಅಭ್ಯರ್ಥಿ ಸಮರ್ಥ ಶಿವಶಂಕರಪ್ಪ ಅವರ ಗೆಲುವಿನ ಆಶಯದೊಂದಿಗೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಇದೇ ವೇಳೆ ಕಾಂಗ್ರೆಸ್ ಪಕ್ಷದ ಪರವಾಗಿ ಘೋಷಣೆಗಳನ್ನು ಕೂಗಿ ವಿಜಯದ ಹರ್ಷ ವ್ಯಕ್ತಪಡಿಸಿದರು.



ಮುಖಂಡರಾದ ಸಿಕಂದರ್‌ಜಾನ್ವೇಕರ, ರಫೀಕ್ ಶಿರೋಳ, ರಾಮಣ್ಣ ರಾಜನಾಳ, ನಾಗೇಶ್ ಬಂಜೆತ್ರಿ, ದೇವಪ್ಪ ವಾಲಿಕಾರ, ಸಮೀರ್‌ದ್ರಾಕ್ಷಿ, ಸುಚಿತ್ ಚಳಗೇರಿ, ಅಬೂಬಕರ್‌ಹಡಗಲಿ, ಕಯುಮ್ ಮೊಮಿನ್, ಅಶ್ಫಾಕ್ ಢವಳಗಿ ಹಾಗೂ ಮಹಿಳಾ ನಾಯಕಿಯರಾದ ಸುಜಾತಾ ಶಿಂಧೆ, ಮಹಾಬುಬಿ ಬಾಗವಾನ, ನೀಲಮ್ಮ ಚಲವಾದಿ, ರೇಷ್ಮೆ ನದಾಫ್, ಹೀನಾ ಕೌಸರ್‌ಸೇರಿ ಕಾರ್ಯಕರ್ತರು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

ಮನೆ ಮನೆಗೆ ಮನ ಮನಕೆ ಡಾ.ಅಂಬೇಡ್ಕರ ಅಭಿಯಾನ

ವಿಜಯಪುರ: ಡಾ.ಬಾಬಾಸಾಹೇಬ ಅಂಬೇಡ್ಕರ ಜಯಂತಿ ಅಂಗವಾಗಿ ನಗರದ ಸಿದ್ದೇಶ್ವರ ಸಂಸ್ಥೆಯ ಎಸ್.ಸಿ ಉಪ್ಪಿನ ಪದವಿ ಮಹಾವಿದ್ಯಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ ಅಧ್ಯಯನ ಪೀಠ ಹಾಗೂ ರಾಷ್ಟ್ರೀಯಸೇವಾಯೋಜನೆ ಕೋಶ, ಐಕ್ಯೂಎಸಿ ಕೋಶದ ಸಹಯೋಗದಲ್ಲಿ ಮನೆ ಮನೆಗೆ ಮನ ಮನಕೆ ಡಾ.ಬಾಬಾಸಾಹೇಬರು ಅಭಿಯಾನದಲ್ಲಿ ಪುಸ್ತಕ ವಿತರಣೆ ಕಾರ್ಯಕ್ರಮ ಜರುಗಿತು. ಮಹಾವಿದ್ಯಾಲಯದ ನಾಮಿನಿ ಚೇರ್ಮನ ಎಂ.ಎಂ.ಸಜ್ಜನ, ಸಂಸ್ಥೆಯ ಸಿಎಒ ಡಾ.ಎಚ್.ವೆಂಕಟೇಶ, ಪ್ರಾಂಶುಪಾಲೆ ಡಾ.ಸುನೀತಾ ಕಟ್ಟಿಮನಿ, ಐಕ್ಯೂಎಸಿ ಕೋಶದ ಮುಖ್ಯಸ್ಥ ಅಭಿಷೇಕ ಚಿಂಚಲಿ ಅಂಬೇಡ್ಕರವರ ಹೊತ್ತಿಗೆಯನ್ನು ಮಕ್ಕಳಿಗೆ ವಿತರಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಜಗದೀಶ ಸಾತಿಹಾಳ, ಪರಶುರಾಮ ತರಲಗಟ್ಟಿ, ರಮೇಶ ಮೇತ್ರಿ, ಸಾವಿತ್ರಿ ಮಠದ, ಸಂಗೀತಾ ಸೌದಿ, ಮಹಾನಂದ ಉಪ್ಪಿನ, ಪರಿದಾ ಉಕ್ಕಲಿ, ಜಯಲಕ್ಷ್ಮಿ ಅನವಾಲ, ಅಜಿತ ಪ್ಯಾಟಿ, ಮೇಘಾ ಹಳಕಟ್ಟಿ, ಸರಸ್ವತಿ.ಎಂ ಭಾಗವಹಿಸಿದ್ದರು.



ಸಾರ್ವಜನಿಕ ನೋಟಿಸ

ನಾನು ಆರ್. ಟಿ. ಬುಲಗೌಡ ವಕೀಲರು, ವಿಜಯಪೂರ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೇ,

ವಿಜಯಪೂರ ಜಿಲ್ಲಾ ತಿಕೋಟಾ ತಾಲೂಕಿನ ತೋರವಿ ಗ್ರಾಮದ ಜಮೀನ ಸರ್ವೆ. ನಂ. 331/*/2ಅ, ಕ್ಷೇತ್ರ : 05 ಎಕರೆ 25 ಗುಂಟೆ, ಆಕಾರ ರೂ 5.00 ಇದನ್ನು ನನ್ನ ಪಕ್ಷಗಾರರು ಆದ 1. ಪ್ರವೀಣ ತಂದೆ. ಸಿದಗೊಂಡಪ್ಪ ಪಟ್ಟಣಶೆಟ್ಟಿ, 2. ದಿನೇಶ ತಂದೆ. ಶಾಂತಿಲಾಲ ಪೋರವಾಲ, 3. ಸುಧೀರ ತಂದೆ. ಪ್ರಕಾಶ ಪಾಟೀಲ ಮತ್ತು 4. ಚೇತನ ತಂದೆ. ರಾಜಕೂಮಾರ ಹಚಡದ ಸಾ॥ ವಿಜಯಪೂರ ಇವರು ಅದರ ಮಾಲೀಕರಾದ ಲೋಕು ತಂದೆ. ಖುಬು ಲವಾಣಿ ಇವರಿಂದ ಖರೀದಿ ತೆಗೆದುಕೋಳ್ಳುವವರು ಇರುತ್ತಾರೆ, ಕಾರಣ ಸದರಿ ಜಮೀನಿನ ಮೇಲೆ ಯಾರದಾದರೂ ಹಕ್ಕು, ಸತ್ತಾ, ಸ್ವಾಮಿತ್ವ, ಖರೀದಿ ಕರಾರು, ವತ್ತಿ, ಬೋಜಾ, ಕೋರ್ಟ ಕೇಸ್ ದಿವಾಣಿ ಅಥವಾ ಕಂದಾಯ, ಅಟ್ಯಾಚಮೆಂಟ ಮಧ್ಯಂತರ ಆದೇಶ, ಪೋಟಗಿ ಆದೇಶ ವಗೈರೆ ಇದ್ದರೇ, ಅಂಥವರು ಇಂದಿನಿಂದ ಏಳು (7) ದಿನಗಳಲ್ಲಿ ಲಿಖಿತವಾಗಿ ಮತ್ತು ಆಧಾರ ಸಹಿತವಾಗಿ ನನ್ನ ವಿಳಾಸಕ್ಕೆ ತಿಳಿಸಬೇಕು. 7 ದಿನಗಳ ನಂತರ ಯಾರದೂ ಯವುದೇ ತಕರಾರು ಇರುವಿದಿಲ್ಲ ಅಂತಾ ಪರಿಗಣಿಸಲಾಗುವದು.

ಸ್ಥಳ : ವಿಜಯಪೂರ.
ದಿನಾಂಕ : 06-05-2026

ಸಹಿ/-
ಆರ್. ಟಿ. ಬುಲಗೌಡ ವಕೀಲರು.
ಕೆಎಆರ್ : 1375/2002.
ಅಂಗಡಿ ನಂ. 2 ಪಿ.ಆಯ್. ಶಿರೂರ ಕಾಂಪ್ಲೆಕ್ಸ ಎಸ್.ಎಸ್. ಹಾಯಸ್ಕೂಲ ಹತ್ತಿರ, ಲಿಂಗದ ಗುಡಿ ರಸ್ತೆ, ವಿಜಯಪೂರ-586101.
ಮೋ. ನಂ. 9845479099/8618406882.

ಮೂಲ ದಾವಾ ಸಂ. 31/2016.

ದಿವಾಣಿ ಪ್ರಕ್ರಿಯಾ ಸಂಹಿತೆ ಸಿ.ಪಿ.ಸಿ ಆದೇಶ 5 ನಿಯಮ 20 (ಎ) ರ ಅಡಿಯಲ್ಲಿ ನ್ಯಾಯಾಲಯದ ಸಮನ್ಸ ಪತ್ರಿಕಾ ಪ್ರಕಟಣೆಯ ಮೂಲಕ.

ಮಾನ್ಯ 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ, ಬಸವನ ಬಾಗೇವಾಡಿ, ಇವರಲ್ಲಿ.

1. ರಸೂಲಸಾಬ ತಂದೆ ಖಾದಿರಸಾಬ ವಾಲಿಕಾರ.
........ವಾದಿ.

ವಿರುದ್ಧ

1. ಮಹಿಬೂಬಸಾಬ ತಂದೆ ಖಾದಿರಸಾಬ ವಾಲಿಕಾರ, ಹಾಗೂ ಇತರರು.
.....ಪ್ರತಿವಾದಿಯರು

ಗೆ,
1) **ಮಹ್ಮದರಫೀಕ ತಂದೆ ಮಹಿಬೂಬಸಾಬ ವಾಲಿಕಾರ,** ವಯಸ್ಸು- 42 ವರ್ಷ, ಉದ್ಯೋಗ- ಖಾಸಗಿ ಕೆಲಸ,ಸಾ.ಕರಭಂಟನಾಳ ತಾ. ಬಸವನ ಬಾಗೇವಾಡಿ.
2) **ಶಂಶಾದ ಗಂಡ ರಜಾಕಸಾಬ ಹುಣಶ್ಯಾಳ,** ವಯಸ್ಸು - 39 ವರ್ಷ, ಉದ್ಯೋಗ- ಮನೆಕೆಲಸ, ಸಾ. ಹುಣಶ್ಯಾಳ ತಾ. ಬಸವನ ಬಾಗೇವಾಡಿ.
3) **ಜಹೀದಾ ಗಂಡ ರಾಜೇಸಾಬ ವಾಲಿಕಾರ,** ವಯಸ್ಸು - 37 ವರ್ಷ, ಉದ್ಯೋಗ- ಮನೆಕೆಲಸ, ಸಾ. ಹುಣಶ್ಯಾಳ ತಾ. ಬಸವನ ಬಾಗೇವಾಡಿ..
4) **ಬಶೀರಾಬಾನು ಗಂಡ ದಾವಲಸಾಬ ಮುಜಾವರ,** ಸಾ.ಕರಭಂಟನಾಳ ತಾ. ಬಸವನ ಬಾಗೇವಾಡಿ. ವಯಸ್ಸು- 35 ವರ್ಷ, ಉದ್ಯೋಗ- ಮನೆಕೆಲಸ,
[ಪ್ರತಿವಾದಿ ಸಂ. 1ಬಿ, 1ಡಿ, 1ಇ, ಮತ್ತು 1ಎಫ್.]

ಈ ಮೇಲೆ ನಮೂದಿಸಿರುವ ಪ್ರಕರಣವನ್ನು ವಾದಿ ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ನಿಮ್ಮನ್ನು ಪ್ರತಿವಾದಿ **ಸಂ. 1ಬಿ, 1ಡಿ, 1ಇ, ಮತ್ತು 1ಎಫ್** ಅಂತಾ ಹೆಸರಿಸಿದ್ದು, ನಿಮಗೆ ತಿದ್ದುಪಡಿ ವಾದಪತ್ರ ತಲುಪಿಸಲು ಸಾಕಷ್ಟು ಪ್ರಯತ್ನ ಮಾಡಿದರೂ ಉದ್ದೇಶ ಪೂರ್ವಕವಾಗಿ ತಗೆದುಕೊಳ್ಳದೇ ಇರುತ್ತದೆ. ಕಾರಣ ಸದರಿ ಪ್ರಕರಣದಲ್ಲಿ ನೀವು ಖುದ್ದಾಗಿ ಅಥವಾ ನಿಮ್ಮ ಪರವಾಗಿ ಮಾಹಿತಿ ಹೊಂದಿರುವ ನ್ಯಾಯವಾದಿಗಳ ಮೂಲಕ ಮಾನ್ಯ ನ್ಯಾಯಾಲಯದಲ್ಲಿ **ದಿನಾಂಕ 20-7-2026 ಮುಂಜಾನೆ 10-30 ಘ.** ಹಾಜರಾಗಲು ಮಾನ್ಯ ನ್ಯಾಯಾಲಯವು ಆದೇಶಿಸಿರುತ್ತದೆ. ಸದರಿ ದಿನಾಂಕದಂದು ಗೈರ ಹಾಜರ ಉಳಿದಲ್ಲಿ ನಿಮ್ಮ ಗೈರ ಹಾಜರಾತಿಯನ್ನು ಪರಿಗಣಿಸಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವದು ಅಂತಾ ತಿಳಿಯಪಡಿಸಿ ಹೊರಡಿಸಿದ ಆದೇಶದ ನೋಟಿಸು.

ದಿನಾಂಕ 06-05-2026 ಸಹಿ ಹಾಗೂ ಮೊಹರಿನೊಂದಿಗೆ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಕೊಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ ಬಸವನ ಬಾಗೇವಾಡಿ.

ಸಹಿ/- ಶ್ರೀ.ಎಸ್.ಎನ್.ಸೋಲ್ಲಾಪಟ್ಟಿ
(ವಾದಿ ಪರ ನ್ಯಾಯವಾದಿಗಳು).

ಹವಾಮಾನ ಬದಲಾವಣೆ ತಡೆಗಟ್ಟುವಲ್ಲಿ ಕೈಜೋಡಿಸಿ



• **ಕನ್ನಡಪ್ರಭ ವಾರ್ತೆ** ವಿಜಯಪುರ

ಹವಾಮಾನ ಬದಲಾವಣೆ ತಡೆಗಟ್ಟುವಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಿ, ಕೆಪಿಐಗಳ ಅನುಷ್ಠಾನಕ್ಕೆ ಜಿಲ್ಲಾ ಪಂಚಾಯತಿ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಸಿ.ಬಿ.ಕುಂಬಾರ ಹೇಳಿದರು.

ಎಂಪ್ರಿ ಸಂಸ್ಥೆಯು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕುರಿತು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕ್ರಿಯಾ ಯೋಜನೆ (ಕೆಎಸ್‌ಎಪಿಸಿಸಿ) ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಂಪ್ರಿ ಸಂಸ್ಥೆಯ ಸಂಶೋಧನಾ ವಿಜ್ಞಾನಿ ಡಾ.ಪವಿತ್ರಾ ನಾಯಕ ಮಾತನಾಡಿ, ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ ಕುರಿತು ಸವಿಸ್ತಾರವಾಗಿ ವಿವರಿಸಿದರು. ಹವಾಮಾನ ಕಾರ್ಯನೀತಿ, ಕಾರ್ಯತಂತ್ರಗಳು, ವಿವಿಧ ಇಲಾಖೆಗಳ ಪಾತ್ರ ಹಾಗೂ ಅಲ್ಪಾವಧಿಯ ಹವಾಮಾನ ಮಾಲಿನ್ಯಕಾರಕಗಳ ಪರಿಣಾಮಗಳು ಮತ್ತು ಜಿಲ್ಲಾಸ್ತರದ ದತ್ತಾಂಶಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಅರಣ್ಯ ಇಲಾಖೆಯ ಶಿವರುದ್ರಪ್ಪ ಕಬಾಡಗಿ ಮಾತನಾಡಿ, ವಿಜಯಪುರಜಿಲ್ಲೆಯಲ್ಲಿಇಲಾಖೆಯು ತೆಗೆದುಕೊಂಡ ಕ್ರಮಗಳ ಕುರಿತು ವಿವರಿಸಿದರು. ಜಲ ಸಂಪನ್ಮೂಲ ತಜ್ಞ ಡಾ.ಶಶಿಕುಮಾರ.ಎನ್ ಜಲ ಸಂಪನ್ಮೂಲ ವಲಯಕ್ಕೆ ಸಂಬಂಧಿಸಿದ ಹವಾಮಾನ ಕ್ರಿಯಾ ಯೋಜನೆ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು. ಸಭೆಯಲ್ಲಿ ಎನ್.ಆರ್.ಡಿ.ಎಂ.ಎಸ್ ಅಧಿಕಾರಿ ಚನ್ನಮ್ಮ ಕರೆಪ್ಪ, ಎಂಪ್ರಿ ಸಂಸ್ಥೆಯ ರುಚಿತಾಶ್ರೀ, ತರಬೇತಿ ಅಸೋಸೊಯೇಟ್ ಹಾಗೂ ತರಬೇತಿ ಸಹಾಯಕ ರಾಘವೇಂದ್ರ.ಎನ್ ಸೇರಿದಂತೆ ತರಬೇತಿ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಸುಮಾರು 55 ಮಂದಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಶಿಕ್ಷಣ ಸಂಸ್ಥೆಗಳ ಸದಸ್ಯರು ಹಾಗೂ ಇತರೆ ಪಾಲುದಾರರು ಭಾಗವಹಿಸಿದ್ದರು.

ಸಂಸ್ಕರಣಾ ಘಟಕ ಅನುಷ್ಠಾನಕ್ಕೆ ಅರ್ಹರಿಂದ ಅರ್ಜಿ

ವಿಜಯಪುರ: ದೇಶದಲ್ಲಿ ದ್ವಿದಳ ಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸಲು ಹಾಗೂ ರೈತರ ಆದಾಯ ಹೆಚ್ಚಿಸಲು ಸಂಸ್ಕರಣಾ ಘಟಕವನ್ನು ಅನುಷ್ಠಾನಗೊಳಿಸಲು ಅರ್ಹರಿಂದ ಕೃಷಿ ಇಲಾಖೆ ಅರ್ಜಿ ಆಹ್ವಾನಿಸಿದೆ. ರೈತ ಉತ್ಪಾದಕ ಸಂಸ್ಥೆಗಳು. ಕ್ಲಸ್ಟರ್ ಮಟ್ಟದ ಒಕ್ಕೂಟಗಳು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಯಾವುದೇ ನೋಂದಾಯಿತ ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿಗಳು ಈ ಯೋಜನೆಯಡಿ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ವೈಯಕ್ತಿಕ ಫಲಾನುಭವಿಯು ಅರ್ಹ ಫಲಾನುಭವಿಯಾಗಲು ಕನಿಷ್ಠ 21 ವರ್ಷದವರಾಗಿರಬೇಕು. ಪ್ರತಿ ಕುಟುಂಬದಿಂದ (ಪತಿ/ಪತ್ನಿ ಹಾಗೂ ಅವಿವಾಹಿತ ಮಕ್ಕಳು) ಒಂದು ಅರ್ಹ ಫಲಾನುಭವಿಗೆ ಮಾತ್ರ ಸಹಾಯಧನ ಪಡೆಯಲು ಅವಕಾಶವಿದೆ.

ಯೋಜನಾ ವೆಚ್ಚದ ಶೇ.15 ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡುವ ಸಾಮರ್ಥ್ಯ ಹೊಂದಿರಬೇಕು. ಎಸ್ಸಿ, ಎಸ್ಟಿ ಮಹಿಳಾ ಫಲಾನುಭವಿಗಳಿಗೆ ಆದ್ಯತೆ ನೀಡಲಾಗುವುದು. ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತಾ ಅಭಿಯಾನ ಕಾರ್ಯಕ್ರಮದಡಿ ಯೋಜನಾ ವೆಚ್ಚದ ಶೇ.33ರಷ್ಟು ಸಹಾಯಧನ ಆರ್ಥಿಕ ನೆರವು ನೀಡಲಾಗುವುದು. ಆಸಕ್ತರು, ಜೂನ್ 3 ರೊಳಗಾಗಿ ಹತ್ತಿರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ತಿಳಿಸಿದೆ.

